ಮೊದಲೇ ಪೂರ್ವಸಿದ್ಧತೆ ನಡೆಸುವುದು ಮಾನವ ಮಾತ್ರರಿಗೆ ಅರಿವಾಗದ ರಹಸ್ಯ. ಒಮ್ಮೆ ಸಕಾರಣವಾಗಿ ಮನೆಗೆ ಬಂದ ಫಲ್ಗುಣ ನಂತರ ವಿನಾಕಾರಣವಾಗಿ ಭೇಟಿ ನೀಡಲು ಆರಂಭಿಸಿದ್ದರೆ ಅದಕ್ಕೆ ಕಾರಣ ವೈಷ್ಣವಿಯ ಅಪ್ಪ. ಅವರ ಮಾತುಗಳಿಗೆ ಕಿವಿಯಾಗುವ ಫಲ್ಗುಣ ಅವರಿಗೆ ಹಿತವಾಗಿಬಿಟ್ಟಿದ್ದ. ಹಿತೈಷಿಯಾಗತೊಡಗಿದ್ದ. ವಯಸ್ಸಿನ ಅಂತರವನ್ನು ಮೀರಿ ಅವರಿಬ್ಬರ ಕೆಳೆ ಎಲ್ಲಿಯವರೆಗೆ ತಲುಪಿತು ಅಂದರೆ ಚೆಕ್ಕಿಗೆ ಸೈನ್ ಮಾಡಿಕೊಟ್ಟುಬಿಟ್ಟರೆ ತಿಂಗಳ ಖರ್ಚಿಗೆ ಬೇಕಾದ ದುಡ್ಡನ್ನು ಫಲ್ಗುಣ ಸ್ವತಃ ಮನೆಗೆ ತಂದು ತಲುಪಿಸುವಷ್ಟು. ಅವರ ಬ್ಯಾಂಕ್ ವ್ಯವಹಾರಗಳೆಲ್ಲಾ ಅವನ ಮೂಲಕವೇ ನಡೆಯುವಷ್ಟು. ಅವನ ಬರುವಿಕೆಗೆ ಅಪ್ಪ ಮಾತ್ರವಲ್ಲ, ತಾನೂ ಕಾಯುತ್ತಿರುತ್ತೇನೆನ್ನುವ ಅಂತರಂಗದ ಪಿಸುದನಿಯನ್ನು ಉದ್ದೇಶಪೂರ್ವಕವಾಗಿ ಅವಗಣಿಸುತ್ತಿದ್ದಳು ವೈಷ್ಣವಿ. ಆದರೆ ಈ ಅವಗಣನೆಯನ್ನೂ ಮೀರಿ ಅವನ ಬರುವಿಕೆಗೆ ಹೃದಯ ಹಾರೈಸುತ್ತಿತ್ತು, ದನಿ ಕೇಳಲು ಕಿವಿ ಕಾತರಿಸುತ್ತಿತ್ತು ಮತ್ತು ಕಣ್ಣುಗಳಲ್ಲಿ ಸದಾ ಒಂದು ಪ್ರತೀಕ್ಷೆಯ ಬೆಳಕು ತುಂಬಿರುತ್ತಿತ್ತು. ವೈಷ್ಣವಿಯ ನಡೆನುಡಿಗಳಲ್ಲಿ, ದಿನಚರಿಯಲ್ಲಿ ಕಂಡೂ ಕಾಣದ ಬದಲಾವಣೆ. ಪಾರ್ಲರಿಗೆ ಎಡತಾಕುವುದು ಜಾಸ್ತಿಯಾಗಿತ್ತು. ಮನೆಯೊಳಗಿದ್ದಾಗ ಹೇಗೆಂದರೆ ಹಾಗಿರುತ್ತಿದ್ದವಳು, ಒಂದು ನೈಟಿಯಲ್ಲಿ ದಿನ ಕಳೆಯುತ್ತಿದ್ದವಳು, ವಾರ್ಡ್‌ರೋಬಿನಲ್ಲಿ ಹ್ಯಾಂಗರಿಗೆ ನೇತು ಹಾಕಿದ್ದ ಸೊಗಸಾದ ಸೀರೆಗಳನ್ನು ಉಟ್ಟು, ಉಚಿತವಾದ ಸರಳ ಆಭರಣಗಳನ್ನು ತೊಟ್ಟು, ಕನ್ನಡಿಯ ಎದುರು ನಿಲ್ಲುವ ಹವ್ಯಾಸ ಬೆಳೆಸಿಕೊಂಡಿದ್ದು ರಾಯರ ಗಮನಕ್ಕೆ ಬರದಿದ್ದರೆ ಕಾರಣ ಅವರ ವಯಸ್ಸು. ಲೋಕದಲ್ಲಿ ವಿಶೇಷವಾದ್ದನ್ನು ಗಮನಿಸುವ ಆಸಕ್ತಿ ಕಳೆದುಕೊಂಡ ಮನಸ್ಸು. ತನ್ನಂತೆ ಫಲ್ಗುಣನೂ ಒಂದು ಅವ್ಯಕ್ತ ಆಕರ್ಷಣಾವಲಯದಲ್ಲಿ ಸಿಕ್ಕಿಬಿದ್ದಿದ್ದಾನೆನ್ನುವುದು ಖಚಿತವಾಗುತ್ತಿದ್ದಂತೆ, ಆ ಸೂಚನೆ ಅವನ ಕಣ್ಣುಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದ್ದಂತೆ, ಗೆಜ್ಜೆ ಕಟ್ಟಿ ಕುಣಿವ ನವಿಲಾಗಿತ್ತು ಮನ. ಸಪ್ತವರ್ಣಗಳ ಕಾಮನಬಿಲ್ಲು ಒಂದು ಹೃದಯದಿಂದ ಮತ್ತೊಂದಕ್ಕೆ ಯಾವಾಗ ಕಮಾನು ಕಟ್ಟಿತೋ ಆ ಕ್ಷಣವನ್ನು ನಿರ್ದಿಷ್ಟವಾಗಿ ಗುರ್ತಿಸಿದವರ್‍ಯಾರು? ನಡೆಯ ಲಾಸ್ಯದಲ್ಲಿ, ನುಡಿಯ ಮಾಧುರ್ಯದಲ್ಲಿ, ಕಣ್ಣ ಮಿಂಚಿನಲ್ಲಿ ವೈಷ್ಣವಿಯ ಅಂತರಂಗ ತೆರೆದ ಪುಸ್ತಕವಾಗುತ್ತಿದ್ದರೆ ಸಣ್ಣಪುಟ್ಟ ಉಡುಗೊರೆಗಳಲ್ಲಿ, ಸದಾ ಬಯಸುವ ಸಾನ್ನಿಧ್ಯದಲ್ಲಿ, ರಂಜಿಸುವ ವಾಕ್ಚಾತುರ್ಯಗಳಲ್ಲಿ ಫಲ್ಗುಣನ ಒಲವು ಬಯಲಾಗುತ್ತಿತ್ತು. ಒಂದು ಹಿರಿಜೀವದ ಸಮಕ್ಷಮದಲ್ಲಿ ತಮ್ಮದೇ ರಹಸ್ಯವಲಯವೊಂದನ್ನು ಸೃಷ್ಟಿಸಿಕೊಂಡು ಪ್ರೌಢರಿಬ್ಬರು ತನ್ಮಯರಾಗುತ್ತಿದ್ದರು. ಹೊಸದಾಗಿ ಪ್ರೀತಿಸಲು ಆರಂಭಿಸಿದ ಹದಿವಯದವರಂತೆ ವಯಸ್ಸಿನ ನೆನಪು ಮರೆತು ಬಿಡುತ್ತಿದ್ದರು. ಫಲ್ಗುಣ ಆ ಮನೆಗೆ ಹಳಬನಾಗುತ್ತಿದ್ದಂತೆ ಅಲ್ಲಿದ್ದ ಅಪ್ಪ, ಮಗಳ ಕುರಿತಾಗಿ ಪ್ರತಿಯೊಂದು ವಿವರವೂ ಅವನಿಗೆ ಲಭ್ಯವಾಗಿತ್ತು. ಯಾವುದನ್ನು ಹೇಳಬೇಕು, ಯಾವುದನ್ನು ಹೇಳಬಾರದು ಎನ್ನುವ ಕುರಿತಾಗಿ ನಿರ್ದಿಷ್ಟ ಗೆರೆ ಎಳೆದುಕೊಳ್ಳದಿದ್ದ ರಾಯರು ಸಂಸಾರದ ಗುಟ್ಟನ್ನೆಲ್ಲಾ ಫಲ್ಗುಣನ ಎದುರು ಹೇಳಿಕೊಳ್ಳುವುದು ವೈಷ್ಣವಿಗೆ ಮುಜುಗರವೆನ್ನಿಸುತ್ತಿದ್ದರೂ ಆ ಮನೆಯ ಒಬ್ಬ ಸಹೃದಯ ಸದಸ್ಯನಂತೆ ಸಹಾನುಭೂತಿಯಿಂದ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ ಫಲ್ಗುಣ ಅವಳಿಗೆ ಮತ್ತಷ್ಟು ಪ್ರಿಯನಾಗತೊಡಗಿದ್ದ. ಅಲ್ಲದೆ ಕಿವಿಗಳು ರಾಯರ ಮಾತನ್ನು ಕೇಳುತ್ತಿದ್ದರೂ ಕಣ್ಣುಗಳು ಅವರನ್ನು ನೋಡುತ್ತಿದ್ದರೂ ಫಲ್ಗುಣನ ಗಮನ ಸದಾ ತನ್ನ ಮೇಲಷ್ಟೇ ಕೇಂದ್ರೀಕೃತವಾಗಿರುತ್ತದೆ ಎನ್ನುವ ಗುಟ್ಟನ್ನು ಅವಳು ಯಾವತ್ತೋ ಗ್ರಹಿಸಿಬಿಟ್ಟಿದ್ದಳು. ತಮ್ಮ ಮೂಗಿನ ನೇರಕ್ಕೆ ತನ್ನಪ್ಪ ಮಾತಾಡುತ್ತಿದ್ದರೂ ವಾಸ್ತವವನ್ನು ದಾಟಿ ಬಂದ ಅವಳಿಗೆ ಇವತ್ತಿಗೂ ಅಪ್ಪನ